# ಹೇಗೆ ಬರೆದೀತು ಪ್ರಾಚೀನದಲ್ಲಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.**: Hare Srinivasa, Taratamyokta Bhajana Samagra Sangraha Vol-2, by Dr. Purnabodha Vadirajacharya Kadagadakai, Belagavi.
3. **Note:** The wordings in both the books are same.

ಹೇಗೆ ಬರೆದೀತು ಪ್ರಾಚೀನದಲ್ಲಿ, ಹಾಗೆ ಇರಬೇಕು ಸಂಸಾರದಲ್ಲಿ

ಪಕ್ಷಿ ಕೂತಿತು ಅಂಗಳದಲ್ಲಿ, ಹಾರಿಹೋಯಿತು ಆ ಕ್ಷಣದಲ್ಲಿ

ಆಡುವ ಮಕ್ಕಳು ಮನೆ ಕಟ್ಟಿದರು, ಆಟ ಸಾಕೆಂದು ಮುರಿದೋಡಿದರು

ಸಂತೆ ನೆರೆದೀತು ನಾನಾ ಪರಿ, ತಿರುಗಿ ಆಯಿತು ತಮ್ಮ ತಮ್ಮ ದಾರಿ

ವಸ್ತಿಕಾರ ವಸ್ತಿಗೆ ಬಂದ, ಹೊತ್ತಾರೆ ಎದ್ದು ಊರಿಗೆ ಹೋದ

ಈ ಸಂಸಾರ ಮಾಯ ಬಿಡಿಸಿ ಕಾಯೋ ಪುರಂದರ ವಿಠಲ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

ದಾಸರು ಕೈಗೊಂಡ ನಿತ್ಯ ಯಾತ್ರೆಯಲ್ಲಿ ಮನವರಿಕೆಯಾಗಬೇಕಾದ ಮನೋಧರ್ಮ 'ಮಾಡುವವನು ನಾನು, ಮಾಡಿಸುವವನು ಹರಿ' ಎಂಬುದು; ಬಂದುದೆಲ್ಲ, ಆಗುವುದೆಲ್ಲ ಭಗವದಿಚ್ಛೆ ಎಂಬುದು. ಬದುಕಿನಲ್ಲಿ ನಾವು ಪಡೆದುಕೊಳ್ಳುವುದಲ್ಲ ನಮ್ಮ ಕರ್ಮಾನುಸಾರವಾಗಿ ಎನ್ನುವ ವಿಶ್ವಾಸ ಮೂಲಭೂತವಾದುದು. ಈ ಕರ್ಮವೆಂಬ ಅಗತ್ಯವನ್ನು ನಿವಾರಿಸುವುದು ಹರಿ ಕೃಪೆ.

**ಪ್ರಾಚೀನದಲ್ಲಿ** – ಹಿಂದಣ ಜನ್ಮಗಳಲ್ಲಿ.

**ನಾನಾ ಪಂಥವ ಹಿಡಿದು** – ಸಂತೆಗೆಂದು ನೆರೆದ ಜನರು ಸಂತೆ ಮುಗಿದ ಮೇಲೆ ತಮ್ಮ ತಮ್ಮದಾರಿ ಹಿಡಿದುಕೊಂಡು ಹೊರಡುವಂತೆ.

**ವಸ್ತಿಕಾರ –** ರಾತ್ರಿಯಲ್ಲಿ ತಂಗಲು ಎಡೆಯನ್ನು ಅರಸುವ ಪ್ರಯಾಣಿಕ.

**Classification:** Ugabhoga
**Ankita:** purandara vittala
**Location:** NA
**Category:** Tatva Jnana
**Sub-Category:** samsara, prachina, pakshi, ata, makkalu, magu, mane, sante, dari, ooru, maya
**Pravachana:** NA
**Explanation:** NA